ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಪುರಸಭೆ/ನಗರಸಭೆ ಹಾಗೂ ಮಹಾನಗರ ಪಾಲಿಕೆಗಳ ವಿಭಾಗಗಳ ಮರು ವಿಂಗಡಣೆ ಮತ್ತು ಗಡಿ ವಿಸ್ತರಣೆಯ ಅನೇಕ ಪ್ರಸ್ತಾವನೆಗಳು ಸರ್ಕಾರದ ಮುಂದೆ ಪರಿಶೀಲನೆಗಾಗಿ ಇದ್ದು, ಇವೆಲ್ಲವುಗಳನ್ನು ಅತ್ಯರ್ಥಗೊಳಿಸಲು ಸಾಕಷ್ಟು ಕಾಲಾವಕಾಶ ಬೇಕಾದ್ದುದರಿಂದ ಡಿಸೆಂಬರ್ ೧೯೮೮ರ ಅಂತ್ಯಕ್ಕೆ ನಡೆಯಬೇಕಾಗಿದ್ದ ಚುನಾವಣೆಗಳನ್ನು ಮುಂದೂಡಬೇಕಾಯಿತು.

ಆ) ಜೂನ್ ೧೯೮೯ರ ಒಳಗೆ ಚುನಾವಣೆ ನಡೆಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಇಲ್ಲ.

ಹೆಗ್ಗಡದೇವನಕೋಟೆ ತಾಲ್ಲೂಕು, ಕಾರಾಪುರದಲ್ಲಿರುವ ಜಂಗಲ್ ಲಾಡ್ಜಸ್ ಮತ್ತು ರಿಸಾರ್ಟ್ಸ್‌ನ್ನು ಪ್ರಾರಂಭಿಸುವ ಬಗ್ಗೆ

೫೨೮. ಶ್ರೀ ಎಂ. ಶಿವಣ್ಣ, (ಹೆಗ್ಗಡದೇವನಕೋಟೆ) –ಮಾನ್ಯ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೆಗ್ಗಡದೇವನಕೋಟೆ ತಾಲ್ಲೂಕು, ಕಾರಾಪುರದಲ್ಲಿರುವ ಜಂಗಲ್ ಲಾಡ್ಜಸ್ ಮತ್ತು ರಿಸಾರ್ಟ್ಸ್‌ನ್ನು ಯಾವಾಗ ಪ್ರಾರಂಭಿಸಲಾಯಿತು? ಇದರ ಉಸ್ತುವಾರಿ ವಹಿಸಿರುವವರು ಯಾರು? ಯಾರ ಅಧೀನದಲ್ಲಿದೆ? ಸಿಬ್ಬಂದಿ ವ್ಯವಸ್ಥೆಯೇನು? ಇಲ್ಲಿರುವ ಸೌಲಭ್ಯಗಳೇನು? ಪ್ರವಾಸಿಗರಿಗೆ ವಿಧಿಸುತ್ತಿರುವ ದರಗಳೇನು ?

ಆ) ಪ್ರಾರಂಭಲಾಗಾಯ್ತು ಎಷ್ಟು ಮಂದಿ ಪ್ರವಾಸಿಗರು ಬಂದು ಹೋಗಿದ್ದಾರೆ ? ಸ್ವದೇಶಿಯರೆಷ್ಟು ? ವಿದೇಶಿಯರೆಷ್ಟು ? ಪ್ರವಾಸೋದ್ಯಮ ಇಲಾಖೆ ಇದರ ಸುಧಾರಣೆಗಾಗಿ ಕ್ರಮಗಳನ್ನು ಕೈಗೊಂಡಿದೆಯೇ (ವಿವರ ನೀಡುವುದು)

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಜಂಗಲ್ ಲಾಡ್ಜಸ್ ಮತ್ತು ರಿಸಾರ್ಟ್ಸ್ ನಿಗಮವು ರಾಜ್ಯ ಸರ್ಕಾರದ ಅಧೀನದಲ್ಲಿದ್ದು, ಕಂಪನಿಯ ಕಾಯಿದೆಯನ್ವಯ ೧೯೮೦ರಲ್ಲಿ ಸ್ಥಾಪಿಸಲ್ಪಟ್ಟು ೧೯೮೫ರಲ್ಲಿ ಕಾರಾಪುರ ಘಟಕವು ಕಾರ್ಯರೂಪಕ್ಕೆ ಬಂತು. ಇಲ್ಲಿ ೫೭ ಮಂದಿ ನೌಕರರು ಇದ್ದಾರೆ ಪ್ರವಾಸಿಗರಿಗೆ ಊಟ ವಸತಿಯ ಜೊತೆಗೆ ಪಕ್ಷಿ ವೀಕ್ಷಣೆಯನ್ನು ಮತ್ತು ನಾಗರಹೊಳೆಯ ವನ್ಯ ಪ್ರಾಣಿ ವೀಕ್ಷಣೆಯನ್ನು ಮಾಡಲು ಅವಕಾಶವಿದೆ. ರಾಷ್ಟ್ರೀಯ ಉದ್ಯಾನದ ದರ ಭಾರತೀಯರಿಗೆ ಮತ್ತು ವಿದೇಶಿಯರಿಗೆ ಕ್ರಮವಾಗಿ ತಲಾ ರೂ. ೪೦೦ ಮತ್ತು ರೂ. ೮೦೦. ಆಫ್ ಸೀಜನ್ನಿನಲ್ಲಿ ಭಾರತೀಯರು ಪ್ರವಾಸಿಗರಿಗೆ ರೂ. ೩೫೦.

ಆ) ೧೯೮೫ ಜನವರಿಯಿಂದ ೧೯೮೯ ಫೆಬ್ರವರಿಯವರೆಗೆ ೭೬೮೫ ಮಂದಿ ಭಾರತೀಯರು ಮತ್ತು ೧೬೪೧ ಮಂದಿ ವಿದೇಶಿಯರು ರಿಸಾರ್ಟ್ಸ್‌ನ್ನು ಸಂದರ್ಶಿಸಿದ್ದಾರೆ. ಮುಂದಿನ ಅಭಿವೃದ್ಧಿಗಾಗಿ ಆರ್ಥಿಕ ನೆರವನ್ನು ಕೋರಿ ಕೇಂದ್ರ ಸರ್ಕಾರಕ್ಕೆ ಬರೆದಿದೆ.

ದೇವನಹಳ್ಳಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದ ಕಲ್ಯಾಣದ ಬಗ್ಗೆ

೫೪೦. ಶ್ರೀ ಪಿ. ಸಿ. ಮುನಿಸ್ವಾಮಯ್ಯ, (ದೇವನಹಳ್ಳಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ತಾಲ್ಲೂಕಿನ ೮ ಮಂಡಲ ಪಂಚಾಯತಿಗಳ ೧೯೮೮-೮೯ರ ಆಯವ್ಯಯದಲ್ಲಿ ಶೇ. ೧೮ರಂತೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗದ ಕಲ್ಯಾಣಕ್ಕಾಗಿ ವಿಂಗಡಿಸಲಾಗಿರಿಸಿದೆಯೇ ?

ಆ) ಹೌದು ಆಗಿದ್ದಲ್ಲಿ ದೇವನಹಳ್ಳಿ ತಾಲ್ಲೂಕು ಪ್ರತಿ ಮಂಡಲ ಪಂಚಾಯತಿಯಲ್ಲೂ ಶೇ. ೧೮ ರಂತೆ ವಿಂಗಡಿಸಲಾಗಿರಿಸಿದ ಮೊತ್ತವೆಷ್ಟು ?

ಇ) ಜನವರಿ ೮೯ರವರೆಗೆ, ಈ ಶೇಕಡಾ ೧೮ರಂತೆ ವಿಂಗಡಿಸಲಾಗಿರಿಸಿದ ಹಣದಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗದ ಕಲ್ಯಾಣಕ್ಕಾಗಿ ಮಾಡಿದ ವೆಚ್ಚ ಎಷ್ಟು ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ)	ಹಾದು		ರೂ.
ಅ)	ಬಿಜ್ಜಾವರ	–	೨೨೩೫೮–೦೦
	ಚನ್ನರಾಯಪಟ್ಟ	–	೮೪೬೨೫–೦೦
	ಬೆಟ್ಟಕೋಟೆ	–	೫೪೦೦೦–೦೦
	ಬೂದಿಗೆರೆ	–	೩೯೨೨೦–೦೦
	ಅವತಿ	–	೫೮೦೦೦–೦೦
	ಕುಂದಾಣ	–	೩೯೨೫೦–೦೦
	ಕೋಯಿರ	–	೨೯೩೪೯–೦೦
	ಕೋರಮಂಗಲ		೨೫೦೦೦–೦೦
ಆ)	ಬಿಜ್ಜಾವರ	–	೧೬೦೦೦–೦೦
	ಚನ್ನರಾಯಪಟ್ಟ	–	೦೦೦–೦೦
	ಬೆಟ್ಟಕೋಟೆ	–	೬೦೦೦–೦೦
	ಬೂದಿಗೆರೆ	–	೧೦೦೦೦–೦೦
	ಅವತಿ	–	೫೦೦೦–೦೦
	ಕುಂದಾಣ	–	೧೬೦೦೦–೦೦
	ಕೋಯಿರ	–	೬೦೦೦–೦೦
	ಕೋರಮಂಗಲ	–	೭೦೦೦–೦೦

ಗದಗ್ ನೀರು ಸರಬರಾಜಿನ ದಂತದ ಬಗ್ಗೆ

೬೦೨೬. ಶ್ರೀ ಕೆ.ಹೆಚ್. ಪಾಟೀಲ್ (ಗದಗ್).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗದಗ್ ನೀರು ಸರಬರಾಜು ಯೋಜನೆಯ ಕಾಮಗಾರಿಯಂ ಯಾವ ಹಂತದಲ್ಲಿದೆ ? ಸರ್ಕಾರವು ಈ ಯೋಜನೆಯನ್ನು ೧೯೮೮ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಉದ್ದೇಶ ಹೊಂದಿದೆಯೇ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಈ ಯೋಜನೆಯ ಎಲ್ಲಾ ಕಾಮಗಾರಿಗಳಿಗೂ ಗುತ್ತಿಗೆದಾರರನ್ನು ನೇಮಿಸಲಾಗಿದೆ. ಹಾಗೂ ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಯೋಜನೆಯ ಬಾಕಿ ಕೆಲಸಗಳನ್ನು ೧೯೯೦ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

Appeals Pending before Gulbarga Zilla Parishat

620. SRI MALLIKARJUNA M. KHARGE, MLA (Gurmitkal).—will the Minister of Rural Development & Panchayat Raj & Wakf be pleased to State.

a) The number of appeals pending before the Vice-President, Gulbarga Zilla Parishat under Zilla Parishat Act.

b) The number of cases disposed off during the year 1987–88 and 1988–89 ?

SRI M.P. PRAKASH (Hon'ble Minister for Rural Development & Panchayat Raj).—

a) 3

b) Nil